

# ದೀಪಿಕಾ ಅಳು-ನಗು

'ಛಪಾಕ್' ಸಿನಿಮಾದ ಮೊದಲ ಟ್ರೇಲರ್ ಬಿಡುಗಡೆಯಾದದ್ದು ವಾರದ ದೊಡ್ಡ ಸುದ್ದಿ. ಅದರಲ್ಲೂ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಮಾತನಾಡುತ್ತಾ ದೀಪಿಕಾ ಕಣ್ಣೀರು ಸುರಿಸಿದ್ದು ಭಾವುಕ ಸನ್ನಿವೇಶ ಸೃಷ್ಟಿಸಿತು. 2005ರಲ್ಲಿ ದೆಹಲಿಯ ರಸ್ತೆಯಲ್ಲಿ ನಡೆದುಹೋಗುತ್ತಿದ್ದ ಲಕ್ಷ್ಮೀ ಅಗರ್‌ವಾಲ್ ಎನ್ನುವ ಹೆಣ್ಣಿನ ಮುಖಕ್ಕೆ ದುಷ್ಕರ್ಮಿಯೊಬ್ಬ ಆಸಿಡ್ ಎರಚಿದ ಘಟನೆ ಮತ್ತು ಆ ಬಳಿಕ ಆ ಹೆಣ್ಣುಮಗಳು ಬದುಕನ್ನು ಎದುರಿಸಿದ ಸತ್ಯ ಘಟನೆಗಳನ್ನು ಆಧರಿಸಿ 'ಛಪಾಕ್' ಸಿದ್ಧವಾಗಿದೆ. ಚಿತ್ರದಲ್ಲಿ ಆ ಪಾತ್ರವೇ ತಾನಾಗಿ ನಟಿಸಿದ ಅನುಭವಗಳನ್ನು ಹೇಳುತ್ತಾ ದೀಪಿಕಾಗೆ ಕಣ್ಣೀರು ತಡೆಯಲಾಗಿಲ್ಲ. ವೇದಿಕೆಯಲ್ಲಿದ್ದ ಚಿತ್ರದ ನಿರ್ದೇಶಕಿ ಮೇಘನಾ ಗುಲ್ಜಾರ್ ಮತ್ತು ಸಹನಟ ವಿಕ್ರಾಂತ್ ಮಸ್ಸೀ ದೀಪಿಕಾ ಸಂಭಾಳಿಸಲು ನೆರವಾದರು.

ಚಿತ್ರದ ಟ್ರೇಲರ್ ನೋಡಿದ್ದೇ ಅಮೀರ್ ಖಾನ್ ಮತ್ತು ಅಲಿಯಾ ಭಟ್, ದೀಪಿಕಾಳ ನಟನೆಯನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಉದ್ಯಮದಲ್ಲೂ ಬಹಳಷ್ಟು ಮಂದಿ ದೀಪಿಕಾಳ ಈ ನಟನೆ 2020ರಲ್ಲಿ ಶ್ರೇಷ್ಠ ನಟಿ ಪ್ರಶಸ್ತಿಗೆ ದೊಡ್ಡ ಸ್ಪರ್ಧೆ ಒಡ್ಡಬಹುದು ಎಂಬ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ. ಅಂದ ಹಾಗೆ ಚಿತ್ರದ ಜನವರಿ 10ಕ್ಕೆ ಥಿಯೇಟರ್‌ಗಳಲ್ಲಿ ಬಿಡುಗಡೆ ಕಾಣಲಿದೆ.

ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭಕ್ಕೆ ಲಕ್ಷ್ಮೀ ಅಗರವಾಲ್ ಕೂಡಾ ಬರುತ್ತಾರೆಂಬ ನಿರೀಕ್ಷೆ ಇತ್ತು. ಆದರೆ ಯಾಕೋ ಬರಲಿಲ್ಲ. ಬಹುಶಃ ಮುಂದಿನ ಪ್ರಚಾರ ಸಭೆಯಲ್ಲಿ ಹಾಜರಾಗಬಹುದು. ಆದರೆ ಸಂದರ್ಶನವೊಂದರಲ್ಲಿ ನಿರ್ದೇಶಕಿ ಮೇಘನಾ ಮತ್ತು ನಟಿ ದೀಪಿಕಾರ ಶ್ರಮವನ್ನು ಲಕ್ಷ್ಮೀ ಹಾಡಿ ಹೊಗಳಿದ್ದಾರೆ. 'ನನ್ನ ಸಂಪೂರ್ಣ ಕಥೆಯನ್ನು ಮೇಘನಾಗೆ ಹೇಳಿದ್ದೇನೆ. ಇಂತಹದ್ದೊಂದು ಪ್ರಕರಣಕ್ಕೆ ಸಿನಿಮಾದ ರೂಪ ನೀಡುವ ಮೂಲಕ ಮೇಘನಾ ಸಮಾಜಕ್ಕೆ ಮಹತ್ವದ ಸಂದೇಶ ಕೊಡುತ್ತಿದ್ದಾರೆ' ಎಂದು ಲಕ್ಷ್ಮೀ ಶ್ಲಾಘಿಸಿದ್ದಾರೆ. ■

# ರಣ್‌ವೀರ್ ಸಿದ್ಧತೆ



ರಣ್‌ವೀರ್ ಸಿಂಗ್ ಯಾವ ಪಾತ್ರವನ್ನೇ ಮಾಡಿದರೂ ಅದರಲ್ಲೊಂದು ಅದಮ್ಯ ಲವಲವಿಕೆಯನ್ನು ತುಂಬುವುದು ಸುಳ್ಳಲ್ಲ. '83' ಸಿನಿಮಾದಲ್ಲಿ ಕಪಿಲ್‌ದೇವ್ ಪಾತ್ರಕ್ಕೆ ಜೀವ ತುಂಬಿದಂತೆಯೇ, 'ಜಯೇಶ್‌ಭಾಯ್ ಜೋರ್‌ದಾರ್' ಸಿನಿಮಾದಲ್ಲಿ ಗುಜರಾತಿಯೊಬ್ಬನ ಪಾತ್ರವನ್ನು ಸಖತ್ ತಮಾಷೆಯಾಗಿ ನಿರ್ವಹಿಸಿರುವ ಸುದ್ದಿ ಬಂದಿದೆ. ಈ ಮಧ್ಯೆ 80ರ ದಶಕದಲ್ಲಿ ಅತ್ಯಂತ ಜನಪ್ರಿಯವಾದ 'ಕಾಮಿಕ್ ಸೂಪರ್‌ಹೀರೊ ನಾಗರಾಜ್' ತುಣುಕುಗಳನ್ನು ಇಟ್ಟುಕೊಂಡು ಸಿನಿಮಾ ಮಾಡುವ ಯತ್ನ ನಡೆದಿದೆ. ರಾಜ್ ಕಾಮಿಕ್ಸ್ ಹೊರತಂದ ಸರಣಿ ಆಧರಿಸಿದ ಈ ಚಿತ್ರಕ್ಕೂ ರಣ್‌ವೀರ್ ನಾಯಕ. 'ಅರ್ಜುನ್ ರೆಡ್ಡಿ'ಯ ನಾಯಕಿ ಶಾಲಿನಿ ಪಾಂಡೆ ಚಿತ್ರದ ನಾಯಕಿ. ಯಶ್‌ರಾಜ್ ಫಿಲಂಸ್‌ನ ಕೊಡುಗೆಯಿದು.

ಕಾಮಿಡಿಯಿಂದ ಸೀರಿಯಸ್ ಪಾತ್ರಕ್ಕೆ ರೋಲ್‌ಆನ್ ಆಗಲೂ ರಣ್‌ವೀರ್ ಸಿದ್ಧತೆ ಮಾಡಿಕೊಂಡಿದ್ದಾನೆ. ಕರಣ್ ಜೋಹರ್‌ನ 'ತಖ್ತ್' ಚಿತ್ರದಲ್ಲಿ ರಣ್‌ವೀರ್‌ನದ್ದು ದಾರಾ ಶಿಕೊ ಪಾತ್ರ. ಗಡ್ಡ ಬೆಳೆಸಲು ರಣ್‌ವೀರ್ ಸಿದ್ಧನಾಗಿದ್ದಾನಂತೆ. ಪಾತ್ರದ ಕುರಿತು ಕರಣ್ ಜೋಹರ್ ಜೊತೆಗೆ ರಣ್‌ವೀರ್ ಒಂದು ಸುತ್ತಿನ ಮಾತುಕತೆಯನ್ನೂ ಮುಗಿಸಿದ್ದಾನೆ. ■



# ಅಲಿಯಾ ಪ್ರತಿಸ್ಪರ್ಧೆ

ಮುಂದಿನ ವರ್ಷದ ಬಿಡುಗಡೆಯಾಗಲಿರುವ ಇನ್ನೊಂದು ಮಹಿಳಾಪ್ರಧಾನ ಕಥೆಯ ಚಿತ್ರ ಅಲಿಯಾ ಭಟ್ ನಟಿಸಿರುವ 'ಗಂಗೂಬಾಯಿ ಖಾಥೇವಾಡಿ'. ಈ ಚಿತ್ರದಲ್ಲಿ ಅಲಿಯಾಳದ್ದು ಘರ್‌ವಾಲಿಯ ಪಾತ್ರ. ಮುಂಬೈಯಲ್ಲಿ ಘರ್‌ವಾಲಿಯ ಮನೆಯ ಸೆಟ್‌ನಲ್ಲಿ ಚಿತ್ರೀಕರಣ ಆರಂಭಗೊಂಡಿದೆ. ನಿರ್ದೇಶಕ ಬನ್ಸಾಲಿ ತನ್ನ ಮಾಮೂಲಿ ಗ್ರ್ಯಾಂಡ್ ಸಿನಿಮಾಗಳ ದಾರಿಯನ್ನು ಬಿಟ್ಟು ಈ ಚಿತ್ರವನ್ನು ಹೊಸ ರೀತಿಯಲ್ಲಿ ನಿರೂಪಿಸಿದ್ದಾರಂತೆ. ಅಲಿಯಾ ಅಂತೂ ವೇಷ, ಭಾಷೆ, ಆಂಗಿಕಗಳಲ್ಲಿ ಪೂರಾ ವಿಭಿನ್ನವಾಗಿ ಕಾಣಿಸಿಕೊಂಡಿದ್ದಾರೆಂದು ಸುದ್ದಿಯಿದೆ. ಸಿನಿಮಾದ ಸೆಟ್‌ನಲ್ಲಿ ಯಾರಿಗೂ ಮೊಬೈಲ್ ಕೊಂಡೊಯ್ಯುವ ಅವಕಾಶ ಇಲ್ಲವಾದ್ದರಿಂದ ಶೂಟಿಂಗ್‌ನ ಯಾವ ತುಣುಕುಗಳೂ ಹೊರಬಂದಿಲ್ಲ.

ಅಂದ ಹಾಗೆ ಬನ್ಸಾಲಿ ಈ ಚಿತ್ರಕ್ಕೆ ಹೊಸ ನಟನನ್ನು ನಾಯಕನನ್ನಾಗಿ ಮಾಡಿದ್ದಾರಂತೆ. ಆತನ ಬಗ್ಗೆ ಈವರೆಗೆ ಯಾವ ಮಾಹಿತಿಗಳನ್ನೂ ಬನ್ಸಾಲಿ ಹೊರಗೆ ಬಿಟ್ಟುಕೊಟ್ಟಿಲ್ಲ. ಅಲಿಯಾಳ ಈ ಚಿತ್ರ ದೀಪಿಕಾಳ 'ಛಪಾಕ್'ಗೆ ರಾಷ್ಟ್ರಪ್ರಶಸ್ತಿಗೆ ಸ್ಪರ್ಧೆ ಒಡ್ಡಬಹುದು ಎಂದು ಬಾಲಿವುಡ್ ಪಂಡಿತರು ಲೆಕ್ಕ ಹಾಕಿದ್ದಾರೆ. ಅದೇನೇ ಇದ್ದರೂ, ಸದ್ಯಕ್ಕೆ ದೇಶದಾದ್ಯಂತ ಅತ್ಯಾಚಾರದ ಪ್ರಕರಣಗಳ ಬಗ್ಗೆಯೇ ದೊಡ್ಡ ಚರ್ಚೆ ನಡೆದಿರುವ ಹಿನ್ನೆಲೆಯಲ್ಲಿ ಹೆಣ್ಣೊಬ್ಬಳ ಮೇಲಿನ ಆಸಿಡ್ ಎರಚಿದ ಪ್ರಕರಣದ ವಸ್ತುವೇ ತೀರ್ಪುಗಾರರನ್ನು ಹೆಚ್ಚಾಗಿ ಸೆಳೆಯಬಹುದು.

■ ಬಿಂದು